## ಪ್ರಬಂಧ

ಶಿಕ್ಷಣ ಮುಗಿಯುವವರೆಗೂ ನಾನು ಶ್ರದ್ಧೆಯಿಂದ ನಿರ್ವಹಿಸಿದ್ದೇನೆ.

ನಮ್ಮ ನೆರೆಹೊರೆಯವರಾಗಿದ್ದ ತಿಗಳರ ಚಿಕ್ಕನರಸಯ್ಯ ಅವರದ್ದು ಅವಿಭಕ್ತ ಕುಟುಂಬ. ಗಂಡು ಹಾಗೂ ಹೆಣ್ಣು ಮಕ್ಕಳು ಸೇರಿ ಸುಮಾರು ಹದಿನೈದಕ್ಕೂ ಹೆಚ್ಚು ಜನ ಒಂದೇ ಮಾಳಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ನಿರಂತರ ದುಡಿಮೆಯಲ್ಲಿದ್ದ ಕೆಳಮಧ್ಯಮ ವರ್ಗದ ಕುಟುಂಬ ಅವರದು. ಜೀವನೋಪಾಯಕ್ಕಾಗಿ ಅವರಿಗಿದ್ದ ಏಕೈಕ ಆಸರೆ ಎಂದರೆ ಒಂದು ಸೊಪ್ಪಿನ ತೋಟ. ಇದೇನು ಎಕರೆಗಟ್ಟಲೆ ಇದ್ದ ತೋಟವಲ್ಲ! ಅರ್ಧ ಎಕರೆಗೂ ಕಡಿಮೆ ಇದ್ದ ತೋಟ ಅದು. ಅದರಲ್ಲಿ ಅರ್ಧ ಭಾಗವನ್ನು ತಮಗಿದ್ದ ಧರ್ಮಶ್ರದ್ಧೆಯ ಕಾರಣಕ್ಕಾಗಿ ಹೂವಿನ ತೋಟವನ್ನಾಗಿ ಮಾಡಿ ಸಾರ್ವಜನಿಕರಿಗಾಗಿ ಬಿಟ್ಟಿದ್ದರು. ಅದರ ಉಳುಮೆಯನ್ನೂ ಇವರೇ ಮಾಡುತ್ತಿದ್ದರು. ಇನ್ನುಳಿದ ಅರ್ಧ ಭೂಮಿಯಲ್ಲಿ ಸೊಪ್ಪಿನ ತೋಟವನ್ನು ಮಾಡಿದ್ದರು. ನೀರಿಗಾಗಿ ಒಂದು ಏತದ ಬಾವಿ ಇತ್ತು. ಸೊಪ್ಪಿನ ತೋಟದಿಂದಲೇ ಅವರ ಕುಟುಂಬ ನಡೆಯುತ್ತಿತ್ತು.

ನಾನು ಅನೇಕ ವರ್ಷಗಳ ಕಾಲ ಈ ಕುಟುಂಬದ ಒಡನಾಟದಲ್ಲಿದ್ದೆ. ಅವರ ಮಾಳಿಗೆ ಮನೆ ಇದ್ದದ್ದೇ ಬಹುತ್ವದ ವಾತಾವರಣದಲ್ಲಿ. ಅವರ ಮನೆಯ ಬಲಕ್ಕೆ ನಾಲ್ಕಾರು ಮುಸ್ಲಿಂ ಕುಟುಂಬಗಳಿದ್ದವು. ಅವರ ಮನೆಯ ಮುಂದೆಯೇ ಕ್ಷೌರಿಕರ ಪೈಕಿಯ ಪೈಲ್ವಾನ್ ನರಸಿಂಹಯ್ಯ ಅವರ ಕುಟುಂಬ ಇತ್ತು. ಅವರ ಮಗ ನರಸಿಂಹಮೂರ್ತಿ ನನ್ನ ಸಹಪಾಠಿಯಾಗಿದ್ದ. ಇನ್ನು ಎಡಗಡೆಗೆ ಕೆಲವು ದೊಂಬರ ಕುಟುಂಬಗಳು ಮತ್ತು ಅವರ ಮನೆಯ ಇನ್ನೊಂದು ಬದಿಗೆ ಹೂವಾಡಿಗರಾದ ನರಸಿಂಹಯ್ಯ ಅವರ ಪೈಕಿಯ ಎರಡು ಮನೆಯಿತ್ತು. ಚಿಕ್ಕನರಸಯ್ಯನವರ ಕುಟುಂಬದಲ್ಲಿದ್ದ ಕೆಲವರು ನನ್ನ ಗೆಳೆಯರಾಗಿದ್ದರು. ನಮ್ಮ ತೋಟದಲ್ಲಿ ಬೆಳೆದ ಸೊಪ್ಪು, ದಂಟು, ಮೂಲಂಗಿಯನ್ನು ತೊಳೆಯಲು ನಾವು ಪ್ರತಿದಿನ ಇವರ ತೋಟಕ್ಕೆ ಹೋಗುತ್ತಿದ್ದೆವು. ನಾನು ನೋಡಿದಾಗಲೆಲ್ಲಾ ಈ ಕುಟುಂಬದ ನಾಲ್ಕಾರು ಜನರ ಕೈಗಳು ಅವರ ತೋಟದ ಮಣ್ಣಿನಲ್ಲಿ ಯಾವಾಗಲೂ ಇಳಿದಿರುತ್ತಿದ್ದವು. ಸೊಪ್ಪಿನ ಮಡಿಗಳಲ್ಲಿ ಕುಳಿತು ಕಳೆ ಕೀಳುವ, ನೆಲ ಅಗಿಯುವ, ಹೆಂಟೆ ಒಡೆಯುವ, ಹೂವಿನ ಗಿಡಗಳ ಮಡಿಗಳನ್ನು ಕೆದಕಿ ನೀರು ಹಾಯಿಸುವ ಮುಂತಾದ ನೆಲ ಹಸನು ಮಾಡುವ ಕೆಲಸಗಳಲ್ಲಿ ಅವರು ತೊಡಗಿರುತ್ತಿದ್ದರು. ಯಾವ ದೇವರ ಅನುಗ್ರಹಕ್ಕಾಗಿಯೂ ಕಾಯದೆ ಎಲ್ಲ ಋತುಮಾನಗಳಲ್ಲೂ ಅವರು ಹೀಗೆಯೇ ಸೊಪ್ಪಿನ ತೋಟದಲ್ಲಿ ಬೆವರು ಬಸಿಯುತ್ತಿದ್ದುದನ್ನು ನಾನು ನೋಡಿದ್ದೇನೆ. ತಮ್ಮ ತೋಟದಾಚೆಗೂ ಒಂದು ಜಗತ್ತು ಇದೆ ಎಂದು ತಿಳಿಯದ ಮುಗ್ಧರ ಕುಟುಂಬ ಇದು. ಈ ಕುಟುಂಬದ ಎಲ್ಲರೂ 'ಒಬ್ಬರ ಬಾಯಿಗೆ ಬೀಳದ ಹಾಗೆ' ಬದುಕಿ 'ತಾವಾಯಿತು; ತಮ್ಮ ಕೆಲಸವಾಯಿತು!' ಎಂದುಕೊಂಡಿದ್ದವರು. ನಮ್ಮ ನೆರೆಹೊರೆಯವರಲ್ಲಿ 'ತೋಟ ಮಾಡಿದರೆ ನಮ್ಮ ಚಿಕ್ಕನರಸಯ್ಯನ ಹಾಗೆ ತೋಟ ಮಾಡಬೇಕು!' ಎನ್ನುವ ಪ್ರಶಂಸೆಯ ಮಾತುಗಳನ್ನಾಡುವವರ ನಡುವೆ ನಾನು ಓಡಾಡುತ್ತಿದ್ದೆ. ತಮ್ಮ ದುಡಿಮೆಯನ್ನೇ ಧರ್ಮಶ್ರದ್ಧೆಯನ್ನಾಗಿ ಪರಿವರ್ತಿಸಿಕೊಂಡಿದ್ದ ಅಪರೂಪದ ಕುಟುಂಬ ಅವರದು. ಈ ಕುಟುಂಬದ ಕಾಯಕನಿಷ್ಠೆಯನ್ನು ಯಾವುದಕ್ಕೋ ಹೋಲಿಸಿ, ಅವರನ್ನು ಅಳೆಯುವ ಇರಾದೆ ನನಗಿಲ್ಲ! ಎಲ್ಲ ಹೋಲಿಕೆಗಳಿಗಿಂತ ಮಿಗಿಲಾದ ಬದುಕು ಅವರದು. ಇದೇ ನಾನು ಇವರಿಗೆ ತೋರುವ ಗೌರವ ಎಂದುಕೊಂಡಿದ್ದೇನೆ. ಇಂತಹ ಶ್ರಮಜೀವಿಗಳಿಂದ ಕಟ್ಟಲ್ಪಟ್ಟಿರುವ ಸಮಾಜವನ್ನು ವಿಭಜಿಸಲು ಯಾವ ಶಕ್ತಿಗಳಿಗೂ ಮತ್ತು ಧರ್ಮಕ್ಕೂ ಸಾಧ್ಯವಿಲ್ಲ! ಎಂಬುದು ಚರಿತ್ರೆಯಲ್ಲಿ ಆಗಾಗ ನಿರೂಪಿತವಾಗುತ್ತಲೇ ಇದೆ.

ಚಿಕ್ಕನರಸಯ್ಯನವರ ಹೂತೋಟವು ಹಲವು ಬಗೆಯ ಹೂಗಳಿಂದ ಕೂಡಿದ ಒಂದು ಮುಗ್ಧ ಸೌಂದರ್ಯದ ಜಗತ್ತು. ಅದು ಇಂದಿನ ಮಾನವ ನಿರ್ಮಿತ ಕೃತಕ ಉದ್ಯಾನವನದಂತಲ್ಲ! ಹೊರಗಿನ ಏಕತಾನತೆಯಿಂದ ನಮ್ಮನ್ನು ಉಳಿಸುವ ಸ್ವರ್ಗದ ನಂದನವನದಂತೆ ಇತ್ತು. ಬಿಳಿ ಮತ್ತು ತಿಳಿಗೆಂಪು ಬಣ್ಣದ ಕಣಗಿಲೆ, ನಾಲ್ಕರು ತರಹದ ದಾಸವಾಳ, ಬಂಗಾರ ಬಣ್ಣದ ಚೆಂಡು ಹೂವು, ಮರಹತ್ತಿ ಕೀಳಬೇಕಾಗಿದ್ದ ಹಳದಿ ಬಣ್ಣದ ಗಂಟೆ ಹೂವು, ಮಿಶ್ರ ಬಣ್ಣದ ಕರ್ಣಕುಂಡಲ, ಹಸಿರು ಪತ್ರೆ, ತೋಟದ ಮೂಲೆಯಲ್ಲಿ ತನ್ನ ತೊಟ್ಟಿನ ಭಾಗದಲ್ಲಿ ನಸುಗೆಂಪಿನಿಂದ ಕೂಡಿದ್ದ ಶ್ವೇತವರ್ಣದ ಹೂಗಳನ್ನೆಲ್ಲಾ ನೆಲಕ್ಕೆ ಮುಡಿಸಿದ್ದ